ವಸುಮತಿ ಉಡುಪ

# ಪುಣ್ಯಮ್ಮ ಎಂಬ ಹೆಂಗಸೂ ಪಶ್ಚಾತ್ತಾಪದ ಮನಸ್ಸೂ



ಒಂದು ವಿಷಯ ಗಮನಿಸಿದ್ದೀರಾ? ನಾವು ಚಿಕ್ಕವರಿದ್ದಾಗ ಬಹಳ ವಯಸ್ಸಾದ ಹಿರಿಯರು ಎಂದು ನಾವೆಂದುಕೊಂಡಿರುವವರಿಗೆ ನಡುಹರೆಯ ಆಗಿರಬಹುದು. ಬಸ್ಸಿನಲ್ಲಿ ಹೋಗುವಾಗ 'ಭಾರೀ ದೂರ' ಎಂದು ಅಂದಾಜಿಸಿಕೊಂಡಿದ್ದ ಊರು ನಾವೆಂದುಕೊಂಡಿದ್ದಷ್ಟು ದೂರದ್ದೇನಲ್ಲ ಎಂದು ಮುಂದೊಂದು ದಿನ ಜ್ಞಾನೋದಯವಾಗಬಹುದು. ಯಾಕೆ ಈ ಮಾತು ಹೇಳುತ್ತಿದ್ದೇನೆ ಅಂದರೆ, ಹದಿಹರೆಯದ ಆರಂಭದ ದಿನಗಳಲ್ಲಿ ನಾನು ಕಂಡ ಪುಣ್ಯಮ್ಮ ಎನ್ನುವ ಹೆಂಗಸಿಗೆ ಇಂತಿಷ್ಟೇ ವರ್ಷ ಆಗಿದ್ದಿರಬಹುದು ಎಂದು ನಿರ್ದಿಷ್ಟವಾಗಿ ಅಂದಾಜಿಸಬಹುದಾದ ವಯಸ್ಸು ನನ್ನದಾಗಿರಲಿಲ್ಲ. ಆ ಕುರಿತು ತಲೆ ಖರ್ಚು ಮಾಡಿದ್ದೂ ಇಲ್ಲ. ಪುಣ್ಯಮ್ಮ ಯಾವಾಗ ನಮ್ಮ ಮನೆಗೆ ಬರುತ್ತಿದ್ದಳು, ಯಾಕೆ ಬರುತ್ತಿದ್ದಳು ಅನ್ನುವುದಕ್ಕೆ ಸಕಾರಣ ಏನಿಲ್ಲ. ಮನಸ್ಸು ಬಂದ ಗಿರಾಕಿ. ಅಂತೂ ವರ್ಷಕ್ಕೆ ನಾಲ್ಕಾರು ಸಲ ಹಾಜರಿ ಹಾಕಿ ವಾರೊಪ್ಪತ್ತು ಇದ್ದು ಹೋಗುತ್ತಿದ್ದಳು. ಬಸವನ ಹಿಂದೆ ಬಾಲದ ಹಾಗೆ ಅವಳ ಹಿಂದೆ ಅವಳ ಅತಿಶಯದ ಮಗ. ನಾಲ್ಕಾರು ವರ್ಷದವನು, ಬಹುಶಃ. ಸದಾ ಅಮ್ಮನ ಸೆರಗು ಹಿಡಿದುಕೊಂಡೇ ತಿರುಗಾಡುತ್ತಿರುತ್ತಿದ್ದ. ಪುಣ್ಯಮ್ಮ ಈ ಮಗನನ್ನು ತಲೆಯ ಮೇಲೆ ಕೂರಿಸಿಕೊಳ್ಳುತ್ತಿರಲಿಲ್ಲ ಅನ್ನುವುದೊಂದು ಬಿಟ್ಟರೆ ಅವಳ ಜೀವ ಅವನ ಕೊರಳಲ್ಲಿ.

ಪುಣ್ಯಮ್ಮ ಬಂದಳು ಅಂದರೆ ಬಚ್ಚಲುಮನೆಯಲ್ಲಿರುತ್ತಿದ್ದ ದಂತಧಾವನ ಸಾಮಗ್ರಿಗಳು, ಮೈ ಸೋಪು, ಬಟ್ಟೆ ಸೋಪುಗಳು ಮನೆಯೊಳಗಿನ ಸುರಕ್ಷಿತ ಜಾಗಕ್ಕೆ ರವಾನೆಯಾಗುತ್ತಿದ್ದುವು. ಇಲ್ಲದಿದ್ದರೆ 'ಕರಿ ನಾಯಿಯನ್ನು ಬಿಳಿ ನಾಯಿ' ಮಾಡುವ ಕತೆಯಂತೆ ಮಗನಿಗೆ ಎಷ್ಟು ಸೋಪು ತಿಕ್ಕಿ ನೀರು ಹುಯ್ದು ಸ್ನಾನ ಮಾಡಿಸಿದರೂ ಸಾಲದು ಪುಣ್ಯಮ್ಮನಿಗೆ. ಬಚ್ಚಲಗೂಡು ಖಾಲಿಯಾಗಿದ್ದರೆ ಮುಲಾಜಿಲ್ಲದೆ ಕೇಳುತ್ತಿದ್ದಳು ಪುಣ್ಯಮ್ಮ,